ಅವಳು ಹತ್ತಿರದಲ್ಲಿಯೇ ನಿಂತಳು. ಸ್ವಲ್ಪ ಹತ್ತಿರದಲ್ಲಿಯೆ. ಪೌಡರಿನ ವಾಸನೆ ಏನಿಲ್ಲ. ಬೆವರಿನ ಒಂದು ಗಂಧ. ಹೆಣ್ಣಿನ ಅದ್ಭುತವಾದ ಪರಿಮಳ! ಅದು ಅವನ ಭಾವಾವೇಶವನ್ನು ಹೆಚ್ಚಿಸುತ್ತಿದೆ. ಅವಳ ಮುಂಗೈ ಎತ್ತಿ ಚುಂಬಿಸಿದರೋ?

ಅವಳು ಹೇಳಿದಳು?

'ನೋಡಿದಾಗ ಈ ಊರವರಲ್ಲವೆಂದು ತಿಳಿಯಿತು. ನಮ್ಮ ಭಾಷೆ ಸರಿಯಾಗಿ ಬರುವುದಿಲ್ಲವೇ?'

'ಇಲ್ಲ.'

'ಇಲ್ಲಿ ಏನು ಉದ್ಯೋಗ?'

ಅವನು ಉದ್ಯೋಗದ ಬಗ್ಗೆ ಹೇಳಿದ.

ಅವಳಿಗೆ ತಿಳಿಯಿತೋ ಏನೋ! ಅವಳು ಕೇಳಿದಳು:

'ಹೆಂಡತಿ ಇದ್ದಾಳೆಯೇ?'

ಅವನು 'ಇಲ್ಲ' ಎಂದು ಹೇಳಿದ.

ಅವಳು ಕೇಳಿದಳು 'ಎಲ್ಲಿ ವಾಸ?'

ಅವನು ತಿರುವಿನ ಹೆಸರು ಮತ್ತು ಮನೆಯ ನಂಬರ್ ಹೇಳಿದ. ಆಗ ಅವಳು ಏನೋ ಭರವಸೆಯ ಧ್ವನಿಯಿಂದ, 'ಇಲ್ಲಿಯೇ ಹತ್ತಿರದಲ್ಲೇ ಅಲ್ಲವೇ'.

ಅವನು ಕೇಳಿದ, 'ಹೆಸರೇನು?'

ಅವಳು ಹೆಸರನ್ನೂ ಹೇಳಿದಳು. ತುಂಬಾ ಹೊತ್ತಿನ ತನಕ ಮೆಲುದನಿಯಲ್ಲಿ ಮಾತುಕತೆ ನಡೆಯಿತು. ಅವಳಿಗೆ ಅಪ್ಪ ಅಮ್ಮಂದಿರಿದ್ದಾರೆ, ಗಂಡನೂ ಇದ್ದಾನೆ. ಆದರೂ ಗಂಡ ಬರುವುದೆಂದಿಲ್ಲ. ಹತ್ತಿರದಲ್ಲಿನ ನಗರದಲ್ಲಿ ಚಿಕ್ಕ ಹೋಟೆಲೊಂದನ್ನು ನಡೆಸುತ್ತಿದ್ದಾನೆ. ಅಲ್ಲಿ ಗಂಡನಿಗೆ ಪ್ರೀತಿಯಿಂದ ಇಟ್ಟುಕೊಂಡವಳೊಬ್ಬಳಿದ್ದಾಳೆ. ಅದು ಒಳ್ಳೆಯದೋ?

ಅವನು ವಿಚಾರಿಸಿದ:

'ನಿಮಗೆ ಮಕ್ಕಳಿದ್ದಾರೋ?' ಅವಳೆಂದಳು: 'ನಮ್ಮ ಮದುವೆ ಕಳೆದು ಒಂದುವಾರ ಕಳೆಯುವುದಕ್ಕೆ ಮೊದಲೇ ನಾವು ಬೇರಾದೆವು. ಈಗ ಮೂರು ವರ್ಷಗಳಾದವು.'

ಬಳಿಕ ಮೌನ. ಮೂರು ವರ್ಷಗಳು! ಅವನು ಯೋಚಿಸಿದ. ಅವಳನ್ನು ಹತ್ತಿರದಲ್ಲೇ ಇರುವ ಬೆಂಚಿನಲ್ಲಿ ಕುಳಿತುಕೊಳ್ಳಲು ಹೇಳಿದರೇನು? ದಿನಗಳು ಕಳೆದು ಹೋದವು. ಹೋ, ದಿನಗಳು! ಹಾಗೆ ಒಂದು ದಿನ ಮಧ್ಯಾಹ್ನದ ಬಳಿಕ ಬಿಡಾರದ ಮುಂಭಾಗದಲ್ಲಿ ಅವಳು ಬರುತ್ತಿದ್ದಳು. ಬೇಡ. ಆತ ಅಡಗಿದ. ಜೊತೆಗಾರರು ಅವಳನ್ನು ಕ್ರೂರವಾಗಿ ಆಸೆಗಣ್ಣುಗಳಿಂದ ನೋಡುತ್ತಿರಬೇಕು. ಯಾವುದು ಸರಕು? ಅವರು ತಮ್ಮಲ್ಲೇ ಮಾತನಾಡಿಕೊಂಡರು. ಅವಳು ನಮ್ಮ ಕಡೆಗೆ ದಿಟ್ಟಿಸಿ ನೋಡಿದಳಲ್ಲವೇ?

ಅವನು ಅದರಲ್ಲಿ ಭಾಗವಹಿಸಲಿಲ್ಲ. ಸಭ್ಯತೆಯಿಂದ ಮೆತ್ತಗಿದ್ದ.

ಗಿಳಿಯ ಒಡೆಯ ಹೇಳಿದ:

'ಯಾರನ್ನೋ ಪ್ರತ್ಯೇಕವಾಗಿ ನೋಡುವುದಕ್ಕೆ ಇಲ್ಲಿಗೆ ಬಂದಹಾಗಿದೆಯಲ್ಲ! ಅವಳು ನೋಡಿದ ರೀತಿ!'

ಅಳಿಲನ್ನು ಸಾಕಲು ಪ್ರಯತ್ನಿಸುವ ವ್ಯಕ್ತಿ ಹೇಳಿದ:

'ಯಾರನ್ನಿರಬಹುದು?'

ಅದಾವುದರಲ್ಲೂ ಗಮನಕೊಡದೆ ಅವನು ಸಂಜೆಗೆ ಹೊರ ಹೊರಟ. ಗುರಿಯಿಲ್ಲದೆ ಕಾಲುಗಳು ನಡೆಯುತ್ತಿವೆ. ಜೇಬಿನಲ್ಲಿ ಹದಿನೈದು ರೂಪಾಯಿಯು ಇದೆ. ಅದರಲ್ಲಿ ಒಂಬತ್ತು ರೂಪಾಯಿಯನ್ನು ಮೆಸ್ಸಿಗೆ ಬಾಕಿ ಕಟ್ಟಬೇಕಾಗಿದೆ. ಆತ ನಡೆದ. ತಂಗಾಳಿ ಬೀಸುತ್ತಿದೆ. ಆಕಾಶ ತುಂಬ ಕಾರ್ಮೋಡಗಳು.